



ಕುಟುಂಬಕ್ಕೆ ಇಂತಹುದೇ ಪ್ರಶ್ನೆ ನಮ್ಮ ಮೇಲೂ ಮೂಡಬಹುದು ಅಲ್ಲವೆ? ಒಂದು ಸಣ್ಣ ಕಾರು ಕೊಂಡು, ಅದಕ್ಕೆ ಪ್ರತಿ ವರ್ಷ ಇನ್ಸೂರೆನ್ಸ್ ಕಟ್ಟಲು ಒದ್ದಾಡುತ್ತಿರುವ, ಯಾವಾಗಲೂ ಅರ್ಧ ಟ್ಯಾಂಕ್ ಮಾತ್ರವೇ ಪೆಟ್ರೋಲ್ ತುಂಬಿಸಿಕೊಂಡು ಬದುಕುತ್ತಿರುವ ನಮ್ಮಂತಹವರನ್ನು ಕಂಡರೆ ವಿಮಾನಗಳನ್ನೇ ಬಳುವಳಿಯಾಗಿ ಕೊಡುವ ಶಕ್ತಿ ಇರುವ ಅಂಬಾನಿ ಅಂತಹವರಿಗೆ ನಮ್ಮ ಜೀವನವೂ ಹಾಗೆಯೇ ಒಂದು ದುರಂತದಂತೆ ಕಾಣಬಹುದಲ್ಲವೆ? ಈತನ ಬಗ್ಗೆ ನೀವು ಕೇಳಿದಂತೆ ಅವರು ಕೂಡ ನಮ್ಮನ್ನು ಕಂಡು, ಇವರು ಯಾಕೆ ತಾನೆ ಬದುಕಿದ್ದಾರೆ? ಎಂದು ಕೇಳಿದರೆ ನಿಮಗೆ ಏನನಿಸುತ್ತದೆ?' ಎಂದಿದ್ದಳು.

ಆದರೆ ನನ್ನ ಪ್ರಶ್ನೆಯ ತಾರ್ಕಿಕ ಅಂತರ್ಯವನ್ನು ಸೂಚಿಸುವ ಸಲುವಾಗಿ ಉತ್ತರಿಸಿದ್ದೆ:

'ನನ್ನ ಪ್ರಶ್ನೆ ಕೇವಲ ಆರ್ಥಿಕ ಸ್ಥಿತಿಗೆ ಮಾತ್ರ ಸೀಮಿತವಾದದ್ದಲ್ಲ ವೀಣಾ. ನನಗೆ, ನೀನು ಮತ್ತು ಪುಣ್ಯ ಇದ್ದೀರಿ. ನಿಮ್ಮನ್ನು ನೋಡಿಕೊಳ್ಳುವ, ನಿಮ್ಮೊಂದಿಗೆ ಜೀವನ ನಡೆಸುವ ಕಾರಣವಿದೆ, ಅದರಲ್ಲಿ ಸುಖವಿದೆ. ನನಗೆ ಸ್ನೇಹಿತರಿದ್ದಾರೆ. ಅವರೊಂದಿಗೆ ಸುಖ ದುಃಖ ಹಂಚಿಕೊಳ್ಳಲು ಅವಕಾಶವಿದೆ. ಬದುಕಲು ನೂರು ಕಾರಣಗಳಿವೆ. ಪ್ರಪಂಚ ಸುತ್ತಾಡುವ ಅಸೆ ಇದೆ' ಎನ್ನುತ್ತಿದ್ದಂತೆ, ತಕ್ಷಣ ಕೈ ಎತ್ತಿ ನನ್ನ ಮಾತಿಗೆ ಅಡ್ಡ ಹಾಕಿ ಕೇಳಿದ್ದಳು.

'ಸುತ್ತಾಡುವ ಆಸೆ ಇದೆ. ಒಪ್ಪಿದೆ. ಆದರೆ ನಿಮಗೆ ತೃಪ್ತಿಯಾಗುವಷ್ಟು ಸುತ್ತಾಡಿದ್ದೀರ?'

'ಇಲ್ಲ. ಅದಕ್ಕಾಗಿ ದುಡಿಯುತ್ತಿದ್ದೇನೆ. ಮುಂದೆ ಸುತ್ತಾಡುತ್ತೇನೆ.'

'ಯಾವ ಗ್ಯಾರಂಟಿ?'

'ಅದನ್ನು ಹೇಳಲು ಯಾರಿಗೂ ಸಾಧ್ಯವಿಲ್ಲ.'

'ಹಾಗೆಯೇ ಆ ವ್ಯಕ್ತಿಯ ಜೀವನವೂ ಇರಬಹುದಲ್ಲವೆ? ನಿಮ್ಮ ಆಸೆಗಳೆಲ್ಲ ಮುಂದೆಂದೋ ತೀರುತ್ತವೆ ಎಂದು ನೀವು ಹೇಗೆ ಅನಿರೀಕ್ಷಿತ ಭವಿಷ್ಯದಲ್ಲಿ ಭರವಸೆ ಇಟ್ಟು ಬದುಕುತ್ತಿದ್ದೀರೋ,